ಪ್ರಸ್ತಾಪಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ನಿಜವಾದ ಪ್ರಸಂಗ ಏನಾಗಿದೆ ಎಂದರೆ, ನಿಜವಾದ ರೈತರು ಬಹಳ ಕಡಿಮೆ ಜನ ಇದ್ದಾರೆ. ಅಲ್ಲಿ ನಿಜವಾಧ ಪ್ರಸಂಗ ಏನಾಗಿದೆ ಎಂದರೆ, ನಿಜವಾದ ರೈತರು ಬಹಳ ಕಡಿಮೆ ಜನ ಇದ್ದಾರೆ. ಈಗ ನಿಜವಾದ ರೈತರಿಗೆ ಪರಿಹಾರ ಸಿಗುತ್ತಿಲ್ಲ ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದಕ್ಕೆ ವಿರೋಧವಾಗಿರುವುದು. ನೀವು ನೇರವಾಗಿ ಏನು ಮಾಡಬೇಕಾಗಿತ್ತು ಎಂದರೆ, ನೀವು ನೋಟಿಫಿಕೇಶನ್ ಮಾಡುವಾಗ ರೈತರ ಬಗ್ಗೆ ಕಾಳಜಿ ಇದ್ದರೆ ನೇರವಾಗಿ ರೈತರಿಗೆ ಸಿಗುವಂಥ ಒಂದು ವ್ಯವಸ್ಥೇ ಮಾಡಬೇಕು. ಆ ರೈತನಿಗೆ ನೇರವಾಗಿ ಹಣ ಸಿಗುವಂತಾಗಬೇಕು.

ಶ್ರೀ ಮುರುಗೇಶ್ ಆರ್.ನಿರಾಣಿ:– ಮಾನ್ಯ ಅಧ್ಯಕ್ಷರೆ, ಕೂಡಗಿ ಪ್ರಾಜೆಕ್ಟ್‌ನಲ್ಲಿ ನೇರವಾಗಿ ನಾವು ರೈತರಿಗೆ ಹಣ ಸಂದಾಯ ಮಾಡಿದ್ದೇವೆ. Preliminary notification ಅದ ದಿವಸದಿಂದ final notification ಆಗುವವರೆಗೆ ಯಾವುದೇ ರೀತಿಯಿಂದ ಆ ಭೂಮಿಯನ್ನು ಹಸ್ತಾಂತರ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವೇ ಇಲ್ಲ. ಯಾವುದೇ ರೀತಿಯಿಂದ GPA holder ಗೆ ದುಡ್ಡು ಕೊಟ್ಟಿಲ್ಲ. ನೇರವಾಗಿ ನಾವು ರೈತರಿಗೆ ಹಣವನ್ನು ಸಂದಾಯ ಮಾಡಿದ್ದೇವೆ.

ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 09(462)

ಶ್ರೀ ಗೂಳಿಹಟ್ಟಿ ಡಿ.ಶೇಖರ (ಹೊಸದುರ್ಗ)

ಪ್ರಶ್ನೆ

ಅ) ಭದ್ರಾ ಮೇಲ್ದಂಡೆ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ಮತ್ತು ಖರ್ಚಾದ ಅನುದಾನವೆಷ್ಟು?

ಆ) ಕಳೆದ ಮೂರು ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಟೆಂಡರ್ ಕರೆದ ದಿನಾಂಕ ಹಾಗೂ ಕೊನೆ ದಿನಾಂಕ ಯಾವುದು; ಟೆಂಡರ್‌ಗಿದ್ದ ಒಟ್ಟು ಹಣವೆಷ್ಟು? ಎಷ್ಟು ಪ್ಯಾಕೇಜ್ ಮಾಡಲಾಗಿತ್ತು; ಟೆಂಡರ್ ಫಾರಂ ಎಷ್ಟು ಜನ ಗುತ್ತಿಗೆದಾರರು ತೆಗೆದುಕೊಂಡಿದ್ದರು; (ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯ ಟೆಂಡರ್‌ನಲ್ಲಿ ಅತಿ ಹೆಚ್ಚು ಯಾರು ನಮೂದು ಮಾಡಿದದರು; ಅತಿ ಕಡಿಮೆ ಯಾರು ನಮೂದು ಮಾಡಿದ್ದರು; ಕೊನೆಗೆ ಟೆಂಡರ್ ಯಾರಿಗೆ

ಆಗಿರುತ್ತದೆ; ಕಡಿಮೆ ದರ ಕೋಟ್ ಮಾಡಿದವರೆಗೋ ಅಥವಾ ಹೆಚ್ಚು ದರ ಕೋಟ್ ಮಾಡಿದವರಿಗೋ ಟೆಂಡರ್‌ನಲ್ಲಿ ಸರ್ಕಾರದ ನಿಯಮಾವಳಿ ಪಾಲಿಸಲಾಗಿದಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರಗಳು ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ	ಆರ್ಥಿಕ ವರ್ಷ (ಲಕ್ಷಗಳಲ್ಲಿ)	ಅನುದಾನ (ಲಕ್ಷಗಳಲ್ಲಿ)	ಭರಿಸಿದ ವೆಚ್ಚ
1	2009–10	9800.00	11807.02
2	2010–11	13183.00	12513.53
3	2011–12	12200.00	11642.29

ಆ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದ್ದು, ಅದನ್ನು ಲಗತ್ತಿಸಲಾಗಿದೆ.

ಇ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದ್ದು, ಅದನ್ನು ಲಗತ್ತಿಸಲಾಗಿದೆ.

ಯೋಜನೆಯ ಕಾಮಗಾರಿಗಳ ಟೆಂಡರ್‌ಗಳ ಪ್ರಕ್ರಿಯೆಗಳನ್ನು ಚಾಲ್ತಿಯಲ್ಲಿರುವ ಇಲಾಖಾ ನಿಯಮಾವಳಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000ರ ಪ್ರಕಾರ ಜರುಗಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 462ಕ್ಕೆ ಅನುಬಂಧ-1

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟ ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ನಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ನಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
					ವರ್ಷ 2009-10					
1	2	3	4	5	6	7	8	9	10	11
1	ಚಿತ್ರದುರ್ಗದಲ್ಲಿ ಭದ್ರಾ ಮೇಲ್ಭಂಡೆ ಯೋಜನೆ ಕಛೇರಿ ಕಟ್ಟಡಗಳ ಸಂಕೀರ್ಣ ನಿರ್ಮಾಣ	1	22.09.2009	21.10.2009	3,93,14,333.00	5	ಕೆ.ಕೃಷ್ಣ, 10.00% ಹೆಚ್ಚು	ಕೃಷ್ಣ, ಕನ್‌ಸ್ಟ್ರಕ್ಷನ್ಸ್ 1.80% ಹೆಚ್ಚು	ಕೃಷ್ಣ, ಕನ್‌ಸ್ಟ್ರಕ್ಷನ್ಸ್ 1.80% ಹೆಚ್ಚು	ಅತಿಕಡಿಮೆ ದರನಮೂದಿಸಿದ ಗುತ್ತಿಗೆದಾರರಿಗೆ, ಕಾಮಗಾರಿಯನ್ನು ವಹಿಸಲಾಗಿದೆ.
2	ಹೊಸದುರ್ಗ ಪಟ್ಟಣದಲ್ಲಿ ಭದ್ರಾ ಮೇಲ್ಭಂಡೆ ಯೋಜನೆ ಉಪ-ವಿಭಾಗ ಕಛೇರಿ ಕಟ್ಟಡ ಮತ್ತು ಸಿಬ್ಬಂದಿ ವಸತಿ ಗೃಹ ನಿರ್ಮಾಣ ಕಾಮಗಾರಿಗಳು	1	10.03.2010	25.03.2010	1,60,690.00	2	ಕೆ.ಶ್ರೀನಿವಾಸರೆಡ್ಡಿ, 4.93% ಹೆಚ್ಚು	ಎಸ್.ಈಶ್ವರಪ್ಪ 2.60% ಕಡಿಮೆ	ಎಸ್.ಈಶ್ವರಪ್ಪ 2.60% ಕಡಿಮೆ	-ಸದರ-
3	ಬಿಆರ್ ಪ್ರಾಜೆಕ್ಟ್ ಕಛೇರಿ ಕಟ್ಟಡದ (ವಿಸ್ತರಣೆ ನಿರ್ಮಾಣ ಕಾಮಗಾರಿ)	1	01.03.2010	26.03.2010	33,62,730.00	2	ವಿಜಯ ಪಟೇಲ್	ಡಿ.ಪರುಶುರಾಮ 2.99% ಹೆಚ್ಚು	ಡಿ.ಪರುಶುರಾಮ 2.99% ಹೆಚ್ಚು	-ಸದರ-

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟ ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ನಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ನಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
4	ಚಿತ್ರದುರ್ಗ ಶಾಖಾ ಕಾಲುವೆಯ ಸರ್ವೆ ಕಾರ್ಯ (0.00 ಕಿ.ಮೀ 10.00 ಕಿ.ಮೀರವರೆಗೆ)	1	10.11.2009	23.11.2009	1,58,174.00	2	ಮೆ॥ಸ್ಟೆಕ್ಟಮ್ ಸರ್ವೆ ಇಂಜಿನಿಯರಿಂಗ್, ಮೈಸೂರು 2.99% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 1.86% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 1.86% ಹೆಚ್ಚು	-ಸದರ-
5	ಚಿತ್ರದುರ್ಗ ಶಾಖಾ ಕಾಲುವೆಯ ಸರ್ವೆ ಕಾರ್ಯ (10.00 ಕಿ.ಮೀ 20.00 ಕಿ.ಮೀ ವರೆಗೆ)	1	04.02.2010	17.02.2010	1,50,955.00	3	ಜಿ.ಕೆ.ಅಸೋಸಿಯೇಟ್, ಮೈಸೂರು 4.28% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 1.89% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 1.89% ಹೆಚ್ಚು	-ಸದರ-
6	ಚಿತ್ರದುರ್ಗ ಶಾಖಾ ಕಾಲುವೆಯ ಸರ್ವೆ ಕಾರ್ಯ (20.00 ಕಿ.ಮೀ 30.00 ಕಿ.ಮೀ.ವರೆಗೆ)	1	04.01.2010	03.02.2010	1.53,770.00	2	ಮೆ॥ಸ್ಟೆಕ್ಟಮ್ ಸರ್ವೆ ಇಂಜಿನಿಯರಿಂಗ್, ಮೈಸೂರು 2.49% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 0.17% ಕಡಿಮೆ	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 0.17% ಕಡಿಮೆ	-ಸದರ-

ವರ್ಷ 2009-10										
ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟು ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ಸಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ಸಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
1	ಚಿತ್ರದುರ್ಗ ನಗರದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಛೇರಿ ಕಟ್ಟಡಗಳ ಸಂಕೀರ್ಣ ನಿರ್ಮಾಣ ಕಾಮಗರಿಯ ಗುಣ ನಿಯಂತ್ರಣ ಪರೀಕ್ಷೆ ನಡೆಸುವುದು	1	23.09.2010	06.10.2010	4,40,000.00	1	*	ನಿಕೇತನ್ ಕನ್ಸಲ್ಟೆಂಡ್ 5.10% ಕಡಿಮೆ	ನಿಕೇತನ್ ಕನ್ಸಲ್ಟೆಂಡ್ 5.10% ಕಡಿಮೆ	ಸದರಿ ಕಾಮಗಾರಿಯ ಟೆಂಡರ್‌ಗೆ ಕೇವಲ ಒಬ್ಬರೆ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು ನಿಗಮದ ವಿತ್ತಾಧಿಕಾರದಂತೆ ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಸ್ವೀಕರಿಸಲಾಗಿದೆ.
2	ಚಿತ್ರದುರ್ಗ ನಗರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಅಧಿಕಾರಿಗಳ ವಸತಿಗೃಹಗಳ ನಿರ್ಮಾಣ (ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರು ಹಗೂ ಸಹಾಯಕ ಕರ್ಯಪಾಲಕ ಅಭಿಯಂತರರು) ಪ್ಯಾಕೇಜ್ -1 ಇಂಡೆಂಟ್ ನಂ.1820	1	18.03.2011	25.03.2011	1,83,34,111.46	1	*	ಎಸ್.ಈಶ್ವರಪ್ಪ 11.10% ಹೆಚ್ಚು	ಎಸ್.ಈಶ್ವರಪ್ಪ 11.10% ಹೆಚ್ಚು	-ಸದರ-

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟ ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ನಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ನಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
3	ಚಿತ್ರದುರ್ಗ ನಗರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಸಹಾಯಕ ಹಾಗೂ ಕಿರಿಯ ಇಂಜಿಯಿಯರ್ ಗಳ ವಸತಿಗೃಹಗಳ ನಿರ್ಮಾಣ (ಬ್ಲಾಕ್ I ಹಾಗೂ ಬ್ಲಾಕ್-II)ಪ್ಯಾಕೇಜ್ - II'ಇಂಡೆಂಟ್ ನಂ.1717	1	19.03.2011	31.03.2011	1,31,87,659.06	1	*	ಎಸ್.ಈಶ್ವರಪ್ಪ 12.50% ಹೆಚ್ಚು	ಎಸ್.ಈಶ್ವರಪ್ಪ 12.50% ಹೆಚ್ಚು	-ಸದರ-
4	ಚಿತ್ರದುರ್ಗದಲ್ಲಿ ನಗರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರಗಳ ವಸತಿಗೃಹಗಲ ನಿರ್ಮಾಣ (ಸಂಖ್ಯೆ 6 ಬ್ಲಾಕ್ 1) ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರುಗಳ ವಸತಿ ಗೃಹಗಳ ನಿರ್ಮಾಣ (ಸಂಖ್ಯೆ 6	1	19.03.2011	31.03.2011	1,44,76,577.44	1	*	ಎಸ್.ಈಶ್ವರಪ್ಪ 12.50% ಹೆಚ್ಚು	ಎಸ್.ಈಶ್ವರಪ್ಪ 12.50% ಹೆಚ್ಚು	-ಸದರ-

	ಬ್ಲಾಕ್ II) ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರುಗಳ ವಸತಿ ಗೃಹಗಳ ನಿರ್ಮಾಣ (ಸಂಖ್ಯೆ 6 ಬ್ಲಾಕ್ II) ಮತ್ತು ಡಿ ಗ್ರೂಪ್ ನೌಕರರ ವಸತಿ ಗೃಹ ನಿರ್ಮಾಣ (ಸಂಖ್ಯೆ 6 ಬ್ಲಾಕ್ I) ಪ್ಯಾಕೇಜ್ – IIIಇಂಡೆಂಟ್ ನಂ.1865.									
5	ಚಳ್ಳಕೆರೆ ಪಟ್ಟಣದಲ್ಲಿ ಉಪ-ವಿಭಾಗ ಕಚೇರಿ ಕಟ್ಟಡ, ತಾಂತ್ರಿಕ ಸಿಬ್ಬಂದಿ ವರ್ಗ (Package-1)	1	04.03.2011	21.03.2011	1,49,24,000.00	2-	ದಿನೇಶ್ 14.00% ಹೆಚ್ಚು	ಎಸ್.ಈಶ್ವರಪ್ಪ 10.00 % ಹೆಚ್ಚು	ಎಸ್.ಈಶ್ವರಪ್ಪ 10.00 % ಹೆಚ್ಚು	ಅತಿಕಡಿಮೆ ದರನಮೂದಿಸಿದ ಗುತ್ತಿಗೆದಾರರಿಗೆ, ಕಾಮಗಾರಿಯನ್ನು ವಹಿಸಲಾಗಿದೆ.
6	ಚಿತ್ರದುರ್ಗ ಶಾಖಾ ಕಾಲುವೆಯ ಬದಲಿ ಸರ್ವೆ ಕಾರ್ಯ (0.00 ಕಿ.ಮೀ. 10.00 ಕಿ.ಮೀ.ವರೆಗೆ)	1	16.03.2011	30.03.2011	50,000.00	2	ಎಸ್.ಎಸ್.ಮಂಜುನಾಥ್ ಮೈಸೂರು 2.98% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟೆಂಟ್, ಮೈಸೂರು 0.00%	ಮೆ.ರೂಟ್ ಡಿಸೈನ್ ಕನ್ಸಲ್ಟಂಟ್.ಮೈಸೂರು 0.00%	–ಸದರ–

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟ ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ನಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ನಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
7	ಚಿತ್ರದುರ್ಗ ಶಾಖಾ ಕಾಲುವೆಯ ಬದಲಿ ಸರ್ವೆ ಕಾರ್ಯ ಕಿ.ಮೀ. 10.00 ಕಿ.ಮೀ 20.00 ಕಿ.ಮೀ.ವರೆಗೆ)	1	16.03.2011	30.03.2011	50,000.00	2	ಎಸ್.ಎಸ್.ಮಂಜುನಾಥ್ ಮೈಸೂರು 5.00% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟಂಟ್, ಮೈಸೂರು 0.00%	ಮೆ.ರೂಟ್ ಡಿಸೈನ್ ಕನ್ಸಲ್ಟಂಟ್,ಮೈಸೂರು 0.00%	-ಸದರ-
8	ಚಿತ್ರದುರ್ಗ ಶಾಖಾ ಕಾಲುವೆಯ ಬದಲಿ ಸರ್ವೆ ಕಾರ್ಯ (20.00 ಕಿ.ಮೀ. 30.00 ಕಿ.ಮೀ.ವರೆಗೆ)	1	16.03.2011	30.03.2011	1,41,050.00	2	ಎಸ್.ಎಸ್.ಮಂಜುನಾಥ್ ಮೈಸೂರು 5.00% ಹೆಚ್ಚು	ಮೆ॥ರೂಟ್ ಡಿಸೈನ್ ಕನ್ಸಲ್ಟಂಟ್, ಮೈಸೂರು 0.00%	ಮೆ.ರೂಟ್ ಡಿಸೈನ್ ಕನ್ಸಲ್ಟಂಟ್,ಮೈಸೂರು 0.00%	-ಸದರ-
9	ಚಿತ್ರದುರ್ಗ ಶಾಖಾ ಕಾಲುವೆಯ ಬದಲಿ ಸರ್ವೆ ಕಾರ್ಯ (30.00 ಕಿ.ಮೀ. 40.00 ಕಿ.ಮೀ.ವರೆಗೆ)	1	16.03.2011	30.03.2011	2,27,076.00	2	ಶಿಲ್ಪ ಕ್ವಾಡ್ ಸರ್ವಿಸಸ್, ಮೈಸೂರು 2.99% ಹೆಚ್ಚು	ಮೆ॥ 3ಜಿ ಕನ್ಸಲ್ಟಂಟ್, ಮೈಸೂರು 1.99% ಹೆಚ್ಚು	ಮೆ॥ 3ಜಿ ಕನ್ಸಲ್ಟಂಟ್, ಮೈಸೂರು 1.99% ಹೆಚ್ಚು	-ಸದರ-
10	ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ವಸತಿ ಗೃಹ, ಆಡಳಿತ ಸಿಬ್ಬಂದಿ ವರ್ಗದ ವಸತಿ ಗೃಹ ಕಟ್ಟಡಗಳ ಕಾಮಗಾರಿಗಳ (Package- II)	1	04.03.2011	22.03.2011	1,30,12,000.00	2	ದಿನೇಶ್ 14.40% ಹೆಚ್ಚು	ಎಸ್.ಈಶ್ವರಪ 10.00% ಹೆಚ್ಚು	ಎಸ್.ಈಶ್ವರಪ 10.00% ಹೆಚ್ಚು	ಅತಿಕಡಿಮೆ ದರನಮೂದಿಸಿದ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲಾಗಿದೆ.

ವರ್ಷ 2011-12										
ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಕಾಮಗಾರಿ ಪ್ಯಾಕೇಜ್	ಟೆಂಡರ್ ಕರೆದ ದಿನಾಂಕ	ಟೆಂಡರ್ ಕೊನೆಯ ದಿನಾಂಕ	ಟೆಂಡರ್ ಗಿಟ್ಟ ಒಟ್ಟು ಮೊತ್ತ	ಟೆಂಡರ್ ಫಾರಂ ಪಡೆದವರ ಸಂಖ್ಯೆ	ಟೆಂಡರ್ ಸಲ್ಲಿ ಅತಿಹೆಚ್ಚು ದರನಮೂದಿಸಿದವರ ಹೆಸರು	ಟೆಂಡರ್ ಸಲ್ಲಿ ಅತಿಕಡಿಮೆ ದರನಮೂದಿಸಿದವರ ಹೆಸರು	ಟೆಂಡರ್ ಪಡೆದವರ ಹೆಸರು	ಷರಾ
1	ಮುತ್ತಿನಕೊಪ, ಎನ್.ಆರ್.ಪೆರ ತಾಲ್ಲೂಕು, ಚಿಕ್ಕಮಂಗಳೂರು ಜಿ.ಹಿಲ್ಲಿ ಕನೀನಿ, ಭ.ಮೇ.ಯೋ. ಉಪ ವಿಭಾಗ ಕಛೇರಿ ಕಟ್ಟಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ವಸತಿಗೃಹ ಮತ್ತು "ಡಿ" ದರ್ಜೆ ನೌಕರರ ವಸತಿಗೃಹಗಳ ನಿರ್ಮಾಣ (Package-I)	1	18.01.2012	03.02.2012	1,38,59,434.06	1	*	ಕೆ.ದಿನೇಶ್ 2.79% ಹೆಚ್ಚು	ಸದರಿ ಕಾಮಗಾರಿಯ ಟೆಂಡರ್‌ಗೆ ಕೇವಲ ಒಬ್ಬರೆ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು ನಿಗಮದ ವಿತ್ತಾಧಿಕಾರದಂತೆ ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಸ್ವೀಕರಿಸಲಾಗಿದೆ.	
2	ಮುತ್ತಿನಕೊಪ, ಎನ್.ಆರ್.ಪೆರ ತಾಲ್ಲೂಕು, ಚಿಕ್ಕಮಂಗಳುರು ಜಿ.ಹಿಲ್ಲಿ ಕನೀನಿ, ಭ.ಮೇ.ಯೋ. ಉಪ ವಿಭಾಗದ ಶಾಖಾಧಿಕಾರಿಗಳ ವಸತಿಗೃಹ unit 1&2 ಮತು ಆಡಳಿತ ಶಾಖೆ ಸಿಬ್ಬಂದಿಯವರ ವಸತಿಗೃಹಗಳ ನಿರ್ಮಾಣ (Package - 2)	1	18.01.2012	03.02.2012	1,32,68,688.81	1	*	ಕೆ.ದಿನೇಶ್ 2.79% ಹೆಚ್ಚು	ಕೆ.ದಿನೇಶ್ 2.79% ಹೆಚ್ಚು	-ಸದರ-

* ಸದರಿ ಟೆಂಡರ್ ಗಳಲ್ಲಿ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿದ್ದು, ಅವರು ನಮೂದಿಸಿದ ದರಗಳಿಗೆ ನಿಗಮದ ಪ್ರದತ್ತ ಆರ್ಥಿಕ ಅಧಿಕಾರಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಟೆಂಡರ್‌ಗಳು ಅಂಗೀಕರಿಸಲ್ಪಟ್ಟಿದೆ.

ಸಂಖ್ಯೆ : ಜಸಂಇ 45 ಡಬ್ಲ್ಯೂಎಲ್ಎ 2012

(ಕೆ.ಎಸ್.ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-4)

ಶ್ರೀ ಗೂಳಿಹಟ್ಟಿ ಡಿ.ಶೇಖರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ 2012-13ನೇ ಸಾಲಿಗೆ ಅನುದಾನ ಎಷ್ಟು ಇದೆ ಎಂದು ದಯಮಾಡಿ ಹೇಳಬೇಕು. ಜೊತೆಗೆ ಆ ಭಾಗದಲ್ಲಿಯೂ ಕೂಡ ಇನ್ನೂ ತೀವ್ರವಾದ ಬರ ಇರುವುದರಿಂದ ಈ ಯೊಜನೆ ಬಹಳಷ್ಟು ತೀವ್ರವಾಗಿ ಆಗಬೇಕಾಗಿರುತ್ತದೆ. ಹಾಗಾಗಿ ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸ-ಬೇಕೆಂದು ಹೇಳಿ ನಾನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ. ಜೊತೆಗೆ ನಮ್ಮ ಕ್ಷೇತ್ರದಲ್ಲಿ ಹೊಸದುರ್ಗ ಮತ್ತು ಚಿತ್ರದುರ್ಗ ಜಿಲ್ಲೆಗೆ ಮತ್ತು ಇತರ ಜಿಲ್ಲೆಗಳಿಗೆ ಈ ಯೋಜನೆ ಯಾವಾಗ ಅಂತಿಮ ಹಂತಕ್ಕೆ ತಲುಪಬಹುದು? ಈಗಾಗಲೇ ಚಿತ್ರದುರ್ಗ ಜಿಲ್ಲೆ ಬರಪೀಡಿತ ಪ್ರದೇಶವೆಂದು ಘೋಷಣೆ ಆಗಿದೆ. ಕೋಲಾರ ಜಿಲ್ಲೆ ಇರಬಹುದು, ತುಮಕೂರು ಜಿಲ್ಲೆ ಇರಬಹುದು. ಇವೆಲ್ಲವುಗಳಿಗೆ ನಾವು ಯಾವ ವರ್ಷದಲ್ಲಿ ನೀರನ್ನು ಕಾಣಬಹುದು? ಬಹಳಷ್ಟು ಜನರಿಗೆ ಗೊಂದಲ ಮತ್ತು ಅನುಮಾನಗಳು ಇವೆ. ದಯಮಾಡಿ ಅದನ್ನು ಪರಿಹರಿಸ-ಬೇಕೆಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಕೇಳಿರುವ ಎಲ್ಲಾ ಮಾಹಿತಿಯನ್ನು ಕೊಡಲಾಗಿದೆ. ಅವರು ಪ್ರಮುಖವಾಗಿ ಯಾವ ವರ್ಷದಲ್ಲಿ ಈ ಯೋಜನೆ ಬರಪೀಡಿತ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಬರುತ್ತದೆ ಎನ್ನುವ ಮಾತನ್ನು ಕೇಳಿದರು. ಈಗಾಗಲೇ ಎರಡು ಹಂತದಲ್ಲಿ ಲಿಫ್ಟ್ ಕೆಲಸಗಳು ಪ್ರಾರಂಭವಾಗಿವೆ. ಅಲ್ಲಿ ಕೆಲವು land acquisition ಸಮಸ್ಯೆಗಳು ಇತ್ತು. ಅದನ್ನು ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಯುತ ಸದಾನಂದಗೌಡರ ನೇತೃತ್ವದಲ್ಲಿ ಒಂದು ಸಭೆಯನ್ನು ಮಾಡಿ ಆ land acquisition ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಆ ಕೆಲಸ ಈಗ ಪುನರಾರಂಭವಾಗಿದೆ. ಅಜ್ಜಂಪುರ ಬಳಿ ಇರುವ ಆ ಕೆನಾಲ್ ಬಗ್ಗೆ ಅಲ್ಲಿಯ ಜನರ ಒಂದು ವಿರೋಧ ಇದ್ದ ಕಾರಣದಿಂದ ಅದಕ್ಕೆ ಬೇಕಾಗಿರುವಂಥದ್ದು. ಅಲ್ಲಿ ಅಂತರ್ಜಲ ಕಡಿಮೆ ಆಗುತ್ತದೆನ್ನುವ ಒಂದು ಭಯ ಇತ್ತು. ಎರಡೂ ಕಡೆಯ ಲಿಫ್ಟ್ ಮತ್ತು 50 ಕೆರೆಗಳಿಗೆ ನೀರನ್ನು ತುಂಬಿಸುವಂಥದ್ದು ಮತ್ತು 10 ಸಾಬಿರ ಎಕರೆ ಜಮೀನಿಗೆ ನೀರಾವರಿ ಮಾಡುವಂಥದ್ದನ್ನು ಎಲ್ಲವನ್ನೂ ಕೊಟ್ಟ ಮೇಲೆ ಮಾತುಕತೆ ಆದ ಮೇಲೆ ಈಗ ಅವರು ಸರ್ವೆ ಕಾರ್ಯಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ.ಈಗ ನಮಗೆ alignmentದೊರೆತಿದೆ. ಅದರಿಂದ ತುಮಕೂರು ಬ್ರಾಂಚ್ ಕೆನಾಲ್ ಮತ್ತು ಇತರ ಬ್ರಾಂಚ್ ಕೆನಾಲ್‌ಗಳನ್ನು ಈ ವರ್ಷ ತೆಗೆದುಕೊಳ್ಳುತ್ತಿದ್ದೇವೆ. 2013ರ ಅಂತ್ಯದಲ್ಲಿ ಅಥವಾ 2013-14 ರಲ್ಲಿ ಈ ನೀರನ್ನು ಹರಿಸುವಂಥ ಒಂದು

ನೀರೀಕ್ಷೆ ಇದೆ. ಈ ಎಲ್ಲಾ land acquisition ಮತ್ತು ಟನಲ್‌ಗೆ ಇರುವಂಥ ವಿರೋಧದಿಂದ ಈ ಕೆಲಸ ಸ್ಥಗಿತವಾಗಿತ್ತು. ಈಗ ಆ ಕೆಲಸ ಪುನರ್ ಆರಂಭವಾಗಿದೆ. ಈ ಒಳ್ಳೆಯ ಸುದ್ದಿಯನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಕೆಲಸವನ್ನು ಆದಷ್ಟು ಬೇಗನೆ ತೀವ್ರಗತಿಯಲ್ಲಿ ಏನು ಟೈಮ್ ಲಾಸ್ ಆಗಿತ್ತು ಅದನ್ನು ಮೇಕಪ್ ಮಾಡುವ ಸಲುವಾಗಿ ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್:ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗೆ ಅಪ್ಪರ್ ಭದ್ರಾ ಬರುತ್ತದೆಂದು ಬಹಳಷ್ಟು ನನಸು ಇದೆ. ಅದನ್ನು ತುಂಬಾ ಜರೂರಾಗಿ ಮಾಡಿಕೊಡಬೇಕೆಂದು ಹೇಳಿ ಕೇಳುತ್ತೇನೆ. ಅದರ ಜೊತೆಗೆ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ನಿಜಕ್ಕೂ ನಮ್ಮ ಮಾನ್ಯ ಸಚಿವರಿಗೆ ತಮ್ಮ ಮೂಲಕ ಒಂದು ಅಭಿನಂದನೆಯನ್ನು ಹೇಳಬೇಕಾಗುತ್ತದೆ. SCPಮತ್ತು TSPಯಲ್ಲಿ ನಮ್ಮ ತಾಲ್ಲೂಕಿಗೆ ಕೆಲಸದ ಆಧಾರದ ಮೇಲೆ ಸುಮಾರು 15 ಕೋಟಿ ರೂ.ಗಳಷ್ಟು ಇತರೆ ಕಾಮಗಾರಿಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಆಧ್ಯತೆಯ ಮೇಲೆ ಕೊಟ್ಟಿದ್ದಾರೆ. ಅದೇ ರೀತಿ ವೇದಾವತಿ ನದಿಯಲ್ಲಿ ಜಲಮೂಲ ಬಹಳಷ್ಟು ಕಡಿಮೆ ಆಗಿರುವುದರಿಂದ ಮಳೆಗಾಲದಲ್ಲಿ ಸ್ವಲ್ಪ ನೀರು ಶೇಖರಣೆ ಆಗುವುದಕ್ಕೆ 4–5 ಬ್ಯಾರೇಜ್‌ಗಳನ್ನು ಈಗಾಗಲೇ ಸರ್ಕಾರಕ್ಕೆ estimateಸಮೇತ ಕಳುಹಿಸಲಾಗಿದೆ. ದಯಮಾಡಿ ಅದನ್ನೂ ಕೂಡ ಮಾಡಿ ಕೊಡಬೇಕು. ಜೊತೆಗೆ ಹೇಮಾವತಿ ಹಿನ್ನೀರಿನ ನೀರನ್ನು ಪೈಪ್‌ಲೈನ್ ಮೂಲಕ ನಮ್ಮ ಬಲ್ಲಾಳ ಕೆರೆ ಸಮುದ್ರಕ್ಕೆ ಬರತಕ್ಕಂಥ ನೀರನ್ನು ಇನ್ನೊಂದು ಹೆಚ್ಚುವರಿಯಾಗಿ ಬೆಲಗೂರು ಕೆರೆಗೂ ಕೂಡ ಹಾಯಿಸಿದರೆ ಒಳ್ಳೆಯದು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರು ಎರಡು ವಿಚಾರಗಳನ್ನು ಹೇಳಿದ್ದಾರೆ. ವೇದಾವತಿ ನದಿಗೆ ಬ್ಯಾರೇಜ್ ಕಟ್ಟುವಂಥದ್ದು ಆ ಪ್ರಸ್ತಾವನೆ ಬಂದ ನಂತರ ಪರಿಶೀಲನೆ ಮಾಡಿ ಅದಕ್ಕೆ ಕೂಡಲೇ ಕ್ರಮ ಕೈಗೊಳ್ಳುತ್ತೇನೆ. ಅವರು ಹೊನ್ನಳ್ಳಿಯ ಏತನೀರಾವರಿಯ ಬಗ್ಗೆ extension of tankಗೆ ಏನು ಹೇಳುತ್ತಿದ್ದಾರೆ ಅದನ್ನೂ ಕೂಡ ಪರಿಶೀಲನೆ ಮಾಡಿ ಅದು feasibilityಇದ್ದರೆ ಆ ಕೆಲಸವನ್ನು ಕೂಡ ಖಂಡಿತವಾಗಿ ನಾವು ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗೆ ಒಂದು ವರದಾನವೆಂದು ನಾವು ತಿಳಿದುಕೊಂಡಿದ್ದೇವೆ. ಚಿತ್ರದುರ್ಗದಲ್ಲಿ ಅಲ್ಪ ಸ್ವಲ್ಪ ಕೆಲಸ ಕಾರ್ಯಗಳು

ಪ್ರಾರಂಭವಾಗಿವೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ರೈತರುಗಳು ತೊಂದರೆ ಕೊಡುತ್ತಿದ್ದಾರೆಂದು ಹೇಳಿದರು, ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಅದನ್ನು ಒಪ್ಪುತ್ತೇನೆ. ಇದೆಲ್ಲಾ ಪ್ರಾರಂಭಿಕ ಹಂತದಲ್ಲಿ ತೊಂದರೆ ಇರತಕ್ಕಂಥದ್ದೇ ಕೋಲಾರಕ್ಕೆ ಎತ್ತಿನ ಹೊಳೆಗೆ ಕ್ಲಿಯರ್ ಮಾಡಿ administrative ಅಪ್ರೂವಲ್ ಕೊಟ್ಟ ಮೆಲೆ ತುಮಕೂರು ಬ್ರಾಂಚ್ ಕೆನಾಲ್‌ನ್ನು ಕ್ಲಿಯರ್ ಮಾಡುವುದಕ್ಕೆ ಏನು ತೊಂದರೆ ಆಗಿದೆ ನನಗೆ ಅರ್ಥವಾಗುತ್ತಿಲ್ಲ. ತಾಂತ್ರಿಕ ಸಮಿತಿಯಲ್ಲಿ 4–5 ಸಲ ಚರ್ಚೆಗೆ ಬಂದಾಗಲೂ ಕೂಡ ಅಧಿಕೃತವಾಗಿ ಇನ್ನೂವರೆಗೆ ಆಡಳಿತಾತ್ಮಕ ಮಂಜೂರಾತಿ ಸರ್ಕಾರದಿಂದ ಕೊಡುವುದಕ್ಕೆ ಏಕೆ ವಿಳಂಬವಾಗುತ್ತಿದೆ. ನೀವು ಧೈರ್ಯವಾಗಿ ಮಾಡಿ, ನಿಮಗೆ ತಾಂತ್ರಿಕ ತೊಂದರೆ ಇರುವಂಥದ್ದು ಗೊತ್ತಿದೆ.Supreme courtನಲ್ಲಿ ಕೇಸ್ ಇರಲಿ ಅಥವಾ Tribunalನಲ್ಲಿ clarification order ಹಾಕಿಕೊಳ್ಳುವುದು ಇರಲಿ ನಿಮಗೆ ಹೆಚ್ಚಿನ ನೀರು ಬರುವುದು ಬಂದೇ ಬರುತ್ತದೆ. ಅದಕ್ಕೆ ನಿಮಗೆ ಅವಕಾಶವಿದೆ.Floodಆಗತಕ್ಕಂಥ ನೀರನ್ನು ಉಪಯೋಗಿಸುವುದಕ್ಕೆ ಅವಕಾಶವಿದೆ. ಮೀನಾಮೇಷ ಎಣಿಸುವುದು ಬೇಡ ಮತ್ತು ಹಿಂಜರಿಯಬೇಡಿ. ದಯಮಾಡಿ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗೆ ಬೇಗ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಈ ವರ್ಷದಲ್ಲಿಯೇ ಪ್ರಾರಂಭ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥ ಸ್ಪಷ್ಟವಾದಂಥ ಒಂದು ತೀರ್ಮಾನವನ್ನು ದಯಮಾಡಿ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪ ನಾಯಕರಿಗೆ ಎಲ್ಲ ಇತಿಹಾಸವೂ ಗೊತ್ತಿದೆ. ತಾಂತ್ರಿಕ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಎಲ್ಲಾ ವಿಚಾರಗಳು ಗೊತ್ತಿದೆ. Tribunalಆದೇಶ ಬಂದ ಮೇಲೆ ನಾವು ಹೆಚ್ಚುವರಿ ನೀರಿಗೆ ಈಗಾಗಲೇ ಕೇಳಿಕೊಂಡಿದ್ದೇವೆ ಮತ್ತು ಬರುತ್ತದೆನ್ನುವ ವಿಶ್ವಾಸ ಕೂಡ ನಮಗೆ ಇದೆ. ಮೊನ್ನೆ ನಾವು ಎತ್ತಿನಹೊಳೆ ಯೋಜನೆಯ ಮೂಲಕ ನೀರನ್ನು ಕೊಡುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಆ ನೀರು ಕೋಲಾರಕ್ಕೆ ಸಂಪೂರ್ಣವಾಗಿ ಬರುವಂಥ ಸಂದರ್ಭದಲ್ಲಿ ತುಮಕೂರು ಬ್ರಾಂಚ್‌ಗೆ ನೀವು ಏಕೆ ಅಳವಡಿಸಬಾರದು ಅಥವಾ ಸೇರಿಸಬಾರದು ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದು ಮೊನ್ನೆತಾನೇ ಆಗಿರುವುದರಿಂದ ಅದರ ಪರಿಶೀಲನೆ ಕಾರ್ಯ ನಡೆದಿದೆ. ಅವರಿಗೆ ಅದರ ಪ್ರಗತಿಯನ್ನು ಕೂಡ ನಾನು ಹೇಳುತ್ತೇನೆ. ಅದೊಂದು ಪಾಲಿಸಿ ಮ್ಯಾಟರ್ ಆಗಿರುವುದರಿಂದ ರಾಜ್ಯದ ಎಲ್ಲಾ ವಿರೋಧ ಪಕ್ಷದ ನಾಯಕರನ್ನು

confidenceತೆಗೆದುಕೊಂಡು ಮಾಡುವಂಥ ಕೆಲಸ ಆಗಿರುವುದರಿಂದ ಒಂದು ಸಭೆಯನ್ನು ಕರೆದು ಆ ನೀರನ್ನು ಏನು ಮಾಡಬೇಕು ಮತ್ತು ಅದರ ಪ್ರಗತಿ ಎಲ್ಲವನ್ನೂ ಖಾತ್ರಿಗೊಳಿಸಿ ಮಾಡಬೇಕಾಗಿದೆ. ಇದನ್ನು ಸ್ವಲ್ಪ carefulಆಗಿ ಮಾಡಬೇಕಾಗಿದೆ. ಆ ಕ್ರಮವನ್ನು ಆದಷ್ಟು ಬೇಗನೆ ಜರುಗಿಸುತ್ತೇನೆ ಮತ್ತು ಆ ಸಭೆಗೆ ತಮ್ಮನ್ನೂ ಕೂಡ ಕರೆಯುತ್ತೇನೆ.

ಉದ್ಯಾನವನ ನಿರ್ಮಾಣ

10 (142) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್(ಜಮಖಂಡಿ)

ಅ) ಜಮಖಂಡಿ ನಗರದ ಹತ್ತಿರ ಇರುವ ಕಟ್ಟೆ ಕೆರೆಗೆ ಸರಕಾರದಿಂದ ಕೆರೆ ತುಂಬುವ ಕಾರ್ಯ ಮಂಜೂರಾಗಿದ್ದರಿಂದ ಪ್ರಕೃತಿ ಸೌಂದರ್ಯ ಹೆಚ್ಚಿಸಲು ಒಂದು ಉದ್ಯಾನವನ ಹಾಗೂ ಪಕ್ಷಿಗಳ ಧಾಮಗಳನ್ನು ನಿರ್ಮಾಣ ಮಾಡುವುದಕ್ಕೆ ಅನುಕೂಲತೆಗಳು ಇರುವುದರಿಂದ ಸರಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಪಿ.ಯೋಗೇಶ್ವರ್ (ಅರಣ್ಯ ಸಚಿವರು)

ಅ) ಜಮಖಂಡಿ ನಗರದ ಸಮೀಪವಿರುವ ಕಟ್ಟೆ ಕೆರೆ ತುಂಬುವ ಯೋಜನೆ ಮಂಜೂರಾಗಿರುವ ಬಗ್ಗೆ ಅರಣ್ಯ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಸದರಿ ಕೆರೆಯು ಅರಣ್ಯೇತರ ಪ್ರದೇಶದಲ್ಲಿರುತ್ತದೆ.

ಈ ಕೆರೆಗೆ ಹೊಂದಿಕೊಂಡಂತೆ ಮೂರು ದಿಕ್ಕಿನಲ್ಲಿ ಸುಮಾರು 300 ಎಕರೆಗಿಂತಲೂ ಹೆಚ್ಚು ಅರಣ್ಯ ಪ್ರದೇಶವಿರುತ್ತದೆ. ಅರಣ್ಯ ಸರ್ವೆ ನಂ: 36 ರಲ್ಲಿ 53.00 ಎಕರೆ 9.00 ಗುಂಟೆ ಹಾಗೂ ಸರ್ವೆ ನಂ: 42 ರಲ್ಲಿ 271.00 ಎಕರೆ 29.00 ಗುಂಟೆ ಅರಣ್ಯ ಪ್ರದೆಶವಿರುತ್ತದೆ. ಒಂದು ವೇಳೆ ಈ ಕೆರೆ ತುಂಬುವ ಯೋಜನೆಯಿಂದ ಕೆರೆಯಲ್ಲಿ ನೀರು ತುಂಬಿದ ಬಳಿಕ ಸಸ್ಯೋದ್ಯಾನ (ಟ್ರೀಪಾರ್ಕ್) ನಿರ್ಮಿಸಲು ಅನುದಾನದ ಲಭ್ಯತೆ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕೆರೆ ತುಂಬಿದ ಬಳಿಕ ಅಲ್ಲಿ ಕಂಡುಬರಬಹುದಾದ ಪಕ್ಷಿಗಳ ರಕ್ಷಣೆಗಾಗಿ "ಪಕ್ಷಿಧಾಮ" ವನ್ನು ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಶ್ರೀಕಾಂತ ಎಸ್.ಕುಲಕರ್ಣಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಜಮಖಂಡಿ ನಗರದಲ್ಲಿ ಮಹಾರಾಜರ ಕಾಲದಿಂದ ಇರತಕ್ಕಂಥ ಒಂದು ಐತಿಹಾಸಿಕ ಕೆರೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ